# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - FRIDAY 25-2-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಉಕ್ರೈನ್, ರಷ್ಯಾ ಸಂಬಂಧಗಳ ಅನಿಶ್ಚಿತತೆ ಗೋಧಿ, ಜೋಳ ದರ ಹೆಚ್ಚಳ

ಜಾಗತಿಕ ಪ್ರಮುಖ ಗೋಧಿ, ಜೋಳ ಉತ್ಪಾದಕ ದೇಶಗಳಾದ **ಉಕ್ರೈನ್, ರಷ್ಯಾ** ಗಳ ಸಂಬಂಧಗಳ ಅನಿಶ್ಚಿತತೆಯಿಂದಾಗಿ ಅಲ್ಲಿಂದ ಪೂರೈಕೆಯಲ್ಲಿ ವ್ಯತ್ಯಯವಾಗುವ ಶಂಕೆಯಿಂದ ಜಾಗತಿಕ ಗೋಧಿ, ಜೋಳ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆಯ ಪ್ರಮುಖ ಉತ್ಪಾದಕ ಹಾಗೂ ರಫ್ತುದಾರ ದೇಶಗಳೂ ಆಗಿರುವುದರಿಂದ ಖಾದ್ಯತೈಲ ದರಗಳ ಮೇಲೂ ಇದು ಪರಿಣಾಮ ಬೀರಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಜಾಗತಿಕ ಗೋಧಿ ಜೋಳ ಆಮದುದಾರ ದೇಶಗಳು ಇತರ ದೇಶಗಳು ಇತರ ದೇಶಗಳಿಂದ ಖರೀದಿ ನಡೆಸುವಂತಾದರೆ ಗೋಧಿ ಜೋಳ ದರಗಳು ಹೆಚ್ಚಳವಾಗುವ ಸಾಧ್ಯತೆಯಿದೆ.

**ಈ ವರ್ಷ ದೇಶದ ಆಹಾರ ಧಾನ್ಯ ದಾಖಲೆ ಉತ್ಪಾದನೆ ನಿರೀಕ್ಷೆ**

೨೦೨೧-೨೨ ರಲ್ಲಿ ಭಾರತದ ಆಹಾರ ಧಾನ್ಯ ಉತ್ಪದನೆ ದಾಖಲೆ ೩೧೬.೦೬ ಮಿಲಿಯನ್ ಟನ್ ಗಳಿಗೆ ತಲುಪಬಹುದೆಂದು ದ್ವಿತೀಯ ಮುಂಚಿತ ಉತ್ಪಾದನಾ ಅಂದಾಜು ವರದಿಯಲ್ಲಿ ತಿಳಿಸಲಾಗಿದೆ. ಈ ವರ್ಷ ಗೋಧಿ ಉತ್ಪಾದನೆ ದಾಖಲೆ ಪ್ರಮಾಣದ ೧೧೧.೩೨ ಮಿಲಿಯನ್ ಟನ್ ಗಳಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ ಉತ್ಪಾದನೆಗಿಂತ ೧.೫೮ ಶೇಕಡಾ ವೃದ್ಧಿ (೧೦೯.೫೯ ಮಿಲಿಯನ್ ಟನ್) ೨೦೨೧-೨೨ ರ ಅಕ್ಕಿ ಖಾರೀಫ್ ಹಾಗೂ ರಾಬಿ ಬೆಳೆ ಸೇರಿ ೧೨೭.೯೩ ಮಿಲಿಯನ್ ಟನ್ ಗಳಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ ಉತ್ಪಾದನೆಯಾದ ೧೨೪.೩೭ ಮಿಲಿಯನ್ ಟನ್ ಗಳಿಂದ ೨.೮೬ ಶೇಕಡಾ ಹೆಚ್ಚು. ೨೦೨೧-೨೨ ರ ತೈಲಬೀಜ ಉತ್ಪಾದನೆ (ನೆಲಗಡಲೆ, ಹರಳುಬೀಜ,ಸೋಯಬೀನ್, ಸೂರ್ಯಕಾಂತಿ, ಸಾಸಿವೆ) ಒಟ್ಟು ೩೭೧.೪೭ ಮಿಲಿಯನ್ ಟನ್ ಗಳಾಗಲಿದೆಯೆನ್ನಲಾಗಿದೆ. ಹಿಂದಿನ ವರ್ಷದ ಉತ್ಪಾದನೆಯಾದ ೩೫೯.೪೬ ಮಿಲಿಯನ್ ಟನ್ ಗಳಿಗಿಂತ ೩.೩೪ ಶೇಕಡಾ ಹೆಚ್ಚಳ. ರಾಬಿ ಬೆಳೆಯ ತೈಲಬೀಜ ಉತ್ಪಾದನೆಯಾದ ೧೨೨.೨೪ ಮಿಲಿಯನ್ ಟನ್ ಗಳಿಗಿಂತ ೯.೦೬ ಶೇಕಡಾ ಹೆಚ್ಚಳ. ಬೇಳೆಕಾಳು ಉತ್ಪಾದನೆ ಹಿಂದಿನ ವರ್ಷಕ್ಕಿಂತ ೫.೮೭ ಶೇಕಡಾ ಹೆಚ್ಚಳವಾಗಿ ೨೬.೯೬ ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದ್ದು, ಹಿಂದಿನ ವರ್ಷ ೨೫.೪೬ ಮಿಲಿಯನ್ ಟನ್ ಬೇಳೆಕಾಳು ಉತ್ಪಾದನೆಯಾಗಿತ್ತೆನ್ನಲಾಗಿದೆ. ಇದರಲ್ಲಿ ಕಡ್ಲೆ ಉತ್ಪಾದನೆ ೧೩.೧೨ ಮಿಲಿಯನ್ ಟನ್ ಗಳಿಗೆ ತಲುಪಿದ್ದು ಹಿಂದಿನ ವರ್ಷ ೧೧.೯೧ ಮಿಲಿಯನ್ ಟನ್ ಉತ್ಪಾದನೆಯಾಗಿತ್ತೆನ್ನಲಾಗಿದೆ. ಕಬ್ಬು ಉತ್ಪಾದನೆ ೪೧೪.೦೪ ಮಿಲಿಯನ್ ಟನ್ ಗಳಿಗೇರಲಿದ್ದು ಹಿಂದಿನ ವರ್ಷ ೩೭೩.೪೬ ಮಿಲಿಯನ್ ಟನ್ ಉತ್ಪಾದನೆಯಾಗಿತ್ತೆನ್ನಲಾಗಿದೆ.